# ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

ಸಿಸಿ ನಂ ಃ 2152/2024

ಸಿಡಬ್ಲ್ಯು ಃ 6

ಪಿಡಬ್ಲ್ಯು ಃ 2

**ಹೆಸರು** ಃ ಹರೀಶ ಭೀಮಪ್ಪ ಸಜಲಿ

**ವಯಾ** ಃ 24 ವರ್ಷ

**ಉದ್ಯೋಗ** ಃ ಫ್ಯಾಕ್ಟರಿಯಲ್ಲಿ ಹೆಲ್ಪಿಂಗ ಕೆಲಸ

**ವಾಸ** ಃ ಚೀಲಭಾಂವಿ ತಾಃ ಹುಕ್ಕೇರಿ

**(ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ**

**1.** ಚಾಸಾ-1 ಮೀನಾಕ್ಷಿ ನನ್ನ ತಾಯಿ. ಚಾಸಾ-7 ವಿನಾಯಕ ನನ್ನ ತಮ್ಮ. ಈಗ ಸುಮಾರು 1 ವರ್ಷದ ಹಿಂದೆ ನಾನು ಡ್ಯಾಂ ಕಡೆಗೆ ಸಂಜೆ 5-30 ಕ್ಕೆ ಗುಳಿಗೆ ತೆಗೆದುಕೊಂಡು ಬರಲು ಮೋಟಾರ ಸೈಕಲ ತೆಗೆದುಕೊಂಡು ಹೋಗುತ್ತಿದ್ದೆ. ಆ ಸಮಯದಲ್ಲಿ ಶೆಟ್ಟೆಪ್ಪ ಕಾಟಾಬಳಿ ಉಸಿಕಿನ ಟಿಪ್ಪರ ತೆಗೆದುಕೊಂಡು ನನ್ನ ಮೇಲೆ ಹಾಯಿಸಲು ಬಂದರು. ನನ್ನ ಮೇಲೆ ಏಕೆ ಹಾಯಿಪಿಸುತ್ತಿ ಎಂದು ಶೆಟ್ಟೆಪ್ಪನಿಗೆ ಕೇಳಿದೆ. ಅಲ್ಲಿ ಸಾತಪ್ಪನ ಅಂಗಡಿ ಹತ್ತಿರ ಸಾಗರ ಕಾಟಾಬಳಿ, ಬಾಳೇಶ ಕಾಟಾಬಳಿ, ಚೇತನ ಕಾಟಾಬಳಿ, ಲಕ್ಕಪ್ಪ ಕಾಟಾಬಳಿ ಇದ್ದರು. ಆಗ ಶೆಟ್ಟೆಪ್ಪ ತನ್ನ ಗಾಡಿಯಲ್ಲಿದ್ದ ರಾಡ್ ತೆಗೆದುಕೊಂಡು ನನಗೆ ಬಡಿಯಲು ಶುರು ಮಾಡಿದ. ಆತ ಹೊಡೆಲು ಶುರು ಮಾಡಿದಾಗ ನನ್ನ ಕೈ, ಕಾಲು ಮತ್ತು ಮುಖಕ್ಕೆ ಗಾಯಗಳಾದವು. ಕೈ ಫ್ರ್ಯಾಕ್ಚರ ಆಯಿತು. ನನ್ನ ಎಡಗಡೆ ದುಬ್ಬಕ್ಕೆ ಫ್ರ್ಯಾಕ್ಚರ ಆಯಿತು. ನನ್ನ ಬಲಗಡೆ ಕಣ್ಣಿನ ಹತ್ತಿರ ಗಾಯ ಆಗಿತ್ತು. ಲಕ್ಕಪ್ಪ ನನಗೆ ಬಡಿಗೆ ತೆಗೆದುಕೊಂಡು ಬಡಿಯಲು ಬಂದ. ಬಾಳೇಶ ಬಡಿಗೆಯಿಂದ ನನ್ನ ಎಡಗೈಗೆ ಹೊಡೆದ. ಹಾಗೂ ಚೇತನ ಕಲ್ಲಿನಿಂದ ನನ್ನ ಕಣ್ಣಿಗೆ ಹೊಡೆದ. ಸಾಗರ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ. ಅಳುಗಾಡಲು ಬಿಡಲಿಲ್ಲ. ಆಗ ಊರಿನಲ್ಲಿದ್ದವರು ಎಲ್ಲರೂ ನಿಂತು ನೋಡುತ್ತಿದ್ದರು, ಯಾರೂ ಬಿಡಿಸಲು ಬಂದಿರುವುದಿಲ್ಲ. ಆ ಸಮಯದಲ್ಲಿ ಆರೋಪಿತರ ತಂದೆಯಾದ

ಗಂಗಪ್ಪ ಕಾಟಾಬಳಿ, ಕೆಂಪಣ್ಣ ಬಾಳಪ್ಪ ಕಾಟಾಬಳಿ , ಶ್ರೀಕಾಂತ ಬಾಳಪ್ಪ ಕಾಟಾಬಳಿ , ಅರ್ಜುನ ಬಾಳಪ್ಪ ಕಾಟಾಬಳಿ ಸಹ ಅಲ್ಲಿ ಇದ್ದರು.

**2.** ಸದರಿ ಜಗಳ ನಮ್ಮ ಮನೆಯಿಂದ **100** ಮೀಟರ ಅಂತರದಲ್ಲಿ ಸಾತಪ್ಪನ ಅಂಗಡಿ ಹತ್ತಿರ ಆಗಿರುತ್ತದೆ. ಆಗ ನನ್ನ ತಾಯಿ ಮತ್ತು ತಮ್ಮ ಬಂದರು. ನಮ್ಮ ತಾಯಿ ಬಿಡಿಸಲು ಬಂದಾಗ ಅವರಿಗೂ ಸಹ ಆರೋಪಿತರು ಜಗ್ಗಾಡಿ ಅವರಿಗೂ ಸಹ ಹೊಡೆದರು. ಶೆಟ್ಟೆಪ್ಪ ನನ್ನ ತಾಯಿಗೆ ಬಡಿದರು. ನನಗೆ ಬಡಿದಾಗ ನನಗೆ ಅರೆ ಜೀವ ಆಗಿತ್ತು. ಸಾಗರ ನನ್ನ ತಮ್ಮನಿಗೆ ಎತ್ತಿ ಒಗೆದ. ಉಸುಕಿನ ಲಾರಿ ತೆಗೆದುಕೊಂಡು ನನ್ನ ಮೇಲೆ ಬರುತ್ತಿದ್ದಾಗ ಏಕೆ ಎಂದು ಕೇಳಿದ್ದಕ್ಕೆ ಆರೋಪಿತರು ಈ ರೀತಿ ಹೊಡಿ ಬಡಿ ಮಾಡಿದರು.

**3.** ಆಗ ನಮ್ಮ ತಂದೆ **7-00** ಗಂಟೆಗೆ ಆಗ ತಾನೆ ಬಂದರು. ಅವರು ಅಂಬ್ಯೂಲನ್ಸಗೆ ಫೋನ ಮಾಡಿ ಕರೆಸಿದರು. ಅಂಬ್ಯೂಲನ್ಸ ಬಂದಾಗ ಆರೂಪಿತರು ಅದಕ್ಕೆ ಹೋಗಲು ದಾರಿ ಬಿಡಲಿಲ್ಲ. ಟಿಪ್ಪರ ತಂದು ಅಡ್ಡ ನಿಲ್ಲಿಸಿದರು. ನಂತರ ನಮ್ಮನ್ನು ಅಂಬ್ಯೂಲನ್ಸನಲ್ಲಿ ಬೆಳಗಾವಿಯ ವಿಜಯ ಆಸ್ಪತ್ರೆಗೆ ಕರೆದುಕೊಂಡು ಹೋದರು. ನನಗೆ ಒಂದು ದಿನ ಐಸಿಯುನಲ್ಲಿ ಇಟ್ಟಿದ್ದರು ಹಾಗೂ **7** ದಿನ ಒಳರೋಗಿಯಾಗಿ ಆ್ಯಡ್ಮಿಟ ಇಟ್ಟಿದ್ದರು. **8** ದಿನ ಆ್ಯಡ್ಮಿಟ ಇದ್ದೆ. ನಮ್ಮ ತಾಯಿ ಹೋಗಿ ಪೋಲಿಸರಿಗೆ ಕಂಪ್ಲೆಂಟ ಮಾಡಿದರು. ಆಗ ಪೋಲಿಸರು ಅರೆಸ್ಟ ಮಾಡಲಿಲ್ಲ , ಎಸ್ ಪಿಯವರಿಗೆ ಭೇಟಿ ಆದೆವು.ಎಸ್ ಪಿ ಅರೆಸ್ಟ ಮಾಡಿ ಎಂದು ಹೇಳಿದರೂ ಸಹ ಪೋಲಿಸರು ಅರೆಸ್ಟ ಮಾಡಲಿಲ್ಲ .

**4.** ನ್ಯಾಯಾಲಯದ ಮುಂದೆ ಇರುವ ಬಡಿಗೆ ಮತ್ತು ರಾಡ್ ನೋಡಿ ಸಾಕ್ಷಿ ಈ ಬಡಿಗೆ ಮತ್ತು ರಾಡ ಅಲ್ಲ ಎಂದು ಹೇಳುತ್ತಾರೆ. ನನಗೆ ಬಡಿದ ರಾಡ್ ಮತ್ತು ಬಡಿಗೆ ಇದಕ್ಕಿಂತ ದಪ್ಪ ಇತ್ತು ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನೂ ಸಹ ನೋಡಿ ಈ ಕಲ್ಲು ಅಲ್ಲ ಎಂದು ಹೇಳುತ್ತಾರೆ .

**5.** ಆರೋಪಿತರು ನಮಗೆ ಜೀವದ ಧಮಕಿ ಹಾಕಿದರು. ಕಂಪ್ಲೆಂಟ ಮಾಡಿದರೆ ನಿಮ್ಮನ್ನು ಕೊಲೆ ಮಾಡುತ್ತೇವೆ, ಊರಿನಲ್ಲಿ ಇರಲು ಬಿಡುವುದಿಲ್ಲ ಎಂದು ಧಮಕಿ ಹಾಕಿದರು.

6. ನಾನು ಈಗ ಬೆಳಗಾವಿಯಲ್ಲಿ ಕೆಲಸಕ್ಕೆ ಇರುತ್ತೇನೆ, ಊರಿನಲ್ಲಿ ಇರುವುದಿಲ್ಲ , ನಮ್ಮ ತಾಯಿ ಒಬ್ಬಳೇ ಊರಿನಲ್ಲಿ ಇರುತ್ತಾರೆ. ಮೊನ್ನೆಯೂ ಸಹ ನನ್ನ ತಾಯಿಗೆ ಜೀವದ ಧಮಕಿ ಹಾಕಿರುತ್ತಾರೆ. ಈಗ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ಬೆಳಗಾವಿಯಲ್ಲಿ ಇಟ್ಟುಕೊಂಡಿರುತ್ತೇನೆ. ಕೆಂಪಣ್ಣ ಕಾಟಾಬಳಿ ಊರಿನಲ್ಲಿ ಬಂದೂಕು ತೆಗೆದುಕೊಂಡು ಓಡಾಡುತ್ತ ಬೆದರಿಕೆ ಹಾಕಿರುತ್ತಾನೆ.

7. ಪೋಲಿಸರು ನಮ್ಮ ಆಸ್ಪತ್ರೆ ದಾಖಲೆಗಳನ್ನು ತೆಗೆದುಕೊಳ್ಳಲಿಲ್ಲ . ಅದನ್ನು ಈಗ ಹಾಜರ ಮಾಡುತ್ತಿದ್ದೇನೆ. ಸಾಕ್ಷಿಯು ತಾನು ಚಿಕಿತ್ಸೆ ಪಡೆದುಕೊಂಡಂತಹ ಡಿಸ್ಚಾರ್ಜ ಸಮರಿ, ಎಕ್ಸರೆ ಹಾಗೂ ಮೆಡಿಕಲ ಬಿಲಗಳನ್ನು ಹಾಜರ ಮಾಡುತ್ತಿದ್ದಾರೆ . ಹಾಗೂ ತನ್ನ  ತಾಯಿಗೆ ಬಡಿದ ಬಗ್ಗೆ ಮತ್ತು ಚಿಕಿತ್ಸೆ ಪಡೆದ ಬಗ್ಗೆ ಡಿಸ್ಚಾರ್ಜ ಸಮರಿ ಹಾಗೂ ಮೆಡಿಕಲ ಬಿಲಗಳನ್ನು ಹಾಜರ ಮಾಡುತ್ತಿದ್ದಾರೆ. ಸಾಕ್ಷಿ ತನ್ನ ತಮ್ಮನಿಗೆ ಬಡಿದ ಬಗ್ಗೆ ಮತ್ತು ಚಿಕಿತ್ಸೆ ಪಡೆದ ಬಗ್ಗೆ ಡಿಸ್ಚಾರ್ಜ ಸಮರಿ ಹಾಗೂ ಮೆಡಿಕಲ ಬಿಲಗಳನ್ನು ಹಾಜರ ಮಾಡುತ್ತಿದ್ದಾರೆ. ಸದರಿ ಡಿಸ್ಚಾರ್ಜ ಸಮರಿ ಹಾಗೂ ಮೆಡಿಕಲ ಬಿಲಗಳು ಬೆಳಗಾವಿಯ ವಿಜಯಾ ಆಸ್ಪತ್ರೆಗೆ ಸಂಬಂಧಪಟ್ಟಿದ್ದು ಇರುತ್ತವೆ. ಸಾಕ್ಷಿಯು ತಾನು ಈ ಘಟನೆ ಆಗುವ ಮುಂಚೆ ತಾನು ನೌಕರಿಗೆ ಸೇರುವ ಬಗ್ಗೆ ದಾಖಲೆಗಳನ್ನು ಸಹ ಹಾಜರ ಮಾಡಿರುತ್ತಾರೆ. ಸದರಿ ದಾಖಲೆಗಳನ್ನು ಪ್ರತ್ಯೇಕವಾಗಿ ಒಂದು ಪ್ಲಾಸ್ಟಕ ಕವರನಲ್ಲಿ ತೆಗೆದುಕೊಳ್ಳಲಾಯಿತು.

**(ಸಸಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**

**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ ಹುಕ್ಕೇರಿ</u>**

**ಸಿಸಿ ನಂ ಃ 2152/2024**

**ಸಿಡಬ್ಲ್ಯು ಃ 1**

**ಪಿಡಬ್ಲ್ಯು ಃ 1**

**ಹೆಸರು** ಃ, ಮೀನಾಕ್ಷಿ ಭೀಮಪ್ಪ ಸಜಲಿ
**ವಯಾ** ಃ 45 ವರ್ಷ
**ಉದ್ಯೋಗ** ಃ ಒಕ್ಕಲುತನ
**ವಾಸ** ಃ ಚೀಲಭಾಂವಿ ತಾಃ ಹುಕ್ಕೇರಿ

**(ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**<u>ಮುಂದುವರೆದ ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ</u>**

**1.** ಜಗಳ ಬಿಡಿಸಲು ನಾನು ಹೋದಾಗ ಶೆಟ್ಟೆಪ್ಪ ನನ್ನ ಕೂದಲು ಹಿಡಿದು ಜಗ್ಗಿದ ಹಾಗೂ ನನ್ನ ಎಡಗೈಗೆ ಬಡಿಗೆಯಿಂದ ಹೊಡೆದ. ನನ್ನ ಮಗ ವಿನಾಯಕನಿಗೆ ಶೆಟ್ಟೆಪ್ಪ ಬಡಿಗೆಯಿಂದ ಹೊಡೆದ ಹಾಗೂ ಸಾಗರ ಆತನನ್ನು ಎತ್ತಿ ಒಗೆದ ಹಾಗೂ ಲಕ್ಕಪ್ಪ ಆತನಿಗೆ ಕೈಯಿಂದ ಬೆನ್ನಿಗೆ ಬಡಿದ. ನ್ಯಾಯಾಲಯದ ಮುಂದೆ ಇರುವ ಬಡಿಗೆ ಮತ್ತು ರಾಡ್ ನೋಡಿ ಸಾಕ್ಷಿ ಈ ಬಡಿಗೆ ಮತ್ತು ರಾಡ ಅಲ್ಲ ಎಂದು ಹೇಳುತ್ತಾರೆ. ಹಾಗೂ ನನಗೆ ಮತ್ತು ನನ್ನ ಮಗನಿಗೆ ಬಡಿದ ಬಡಿಗೆ ಮ್ತು ರಾಡ್ ಇದಕ್ಕಿಂತ ದಪ್ಪ ಇತ್ತು ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಸಾಕ್ಷಿ ಇದೇ ಕಲ್ಲಿನಿಂದ ನನ್ನ ಮಗ ಹರೀಶನ ಕಣ್ಣಿಗೆ ಹೊಡೆದಿದ್ದಾಗಿ ಹೇಳುತ್ತಾರೆ. ಸದರಿ ಕಲ್ಲುಗಳನ್ನು ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು.

**2.** ಹರೀಶನಿಗೆ ಹೊಡೆದಿದ್ದರಿಂದ ಆತನ ಎಡಗಾಲು ಮುರಿದಿದ್ದು ಆತನಿಗೆ ರಾಡ್ ಹಾಕಲಾಗಿದೆ. ಹರೀಶನ ಎಡಭುಜಕ್ಕೆ ಫ್ರ್ಯಾಕ್ಚರ ಆಗಿದ್ದು, ಎಲಬೂ ಸಹ ಮುರಿದಿರುತ್ತದೆ. ನನ್ನ ಮಗನನ್ನು ಆ ಸಮಯದಲ್ಲಿ ಐಸಿಯುದಲ್ಲಿ ಇಡಲಾಗಿತ್ತು. ನಾವೆಲ್ಲರೂ ವಿಯ ಆಸ್ಪತ್ರೆ ಬೆಳಗಾವಿಯಲ್ಲಿ ಆ್ಯಡ್ಮಿಟ ಆಗಿದ್ದೆವು. ಆ ಸಮಯದಲ್ಲಿ ಅಂಬ್ಯೂಲನ್ಸ ಬಂದು , ಆ ಅಂಬ್ಯೂಲನ್ಸಗೂ ಸಹ ಆರೋಪಿತರು ತಮ್ಮ ಟಿಪ್ಪರ ತೆಗೆದುಕೊಂಡು ಹಾಯಿಸಲು ಪ್ರಯತ್ನ ಮಾಡಿದರು, ಅದಕ್ಕೆ ಮುಂದೆ ಹೋಗಲು ಜಾಗ ಬಿಡಲಿಲ್ಲ. ನನ್ನ ಮಗನಿಗೆ ಆ ಸಮಯದಲ್ಲಿ ಅರಿವಿಲ್ಲದಂತೆ ಆಗಿತ್ತು .

ಈ ಘಟನೆ ಆದ 2 ದಿನಗಳ ನಂತರ ನಾನು ಪೋಲಿಸ ಠಾಣೆಗೆ ಹೋಗಿ ದೂರು ಕೊಟ್ಟೆ .

3. ಅಂದು ಕೊಟ್ಟ ಸದ್ರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ನಾನು ಹೇಳಿದಂತೆ ಬಿ ಎಸ್ ಸಜಲಿ ಇವರು ದೂರು ಬರೆದರು. ನನ್ನ ಗಂಡ ಬೆಳಗಾವಿ ಕೋರ್ಟಿನಲ್ಲಿ ಪ್ರೊಸೆಸ್ ಸರ್ವರ ಆಗಿ ಕೆಲಸ ಮಾಡುತ್ತಾರೆ.

4. ದೂರು ಕೊಟ್ಟ ನಂತರ ಮರುದಿನ ಪೋಲಿಸರು ಸ್ಥಳಕ್ಕೆ ಬಂದಾಗ ನಾನು ಸ್ಥಳ ತೋರಿಸಿದ್ದು ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಹಾಗೂ ಅಂದು ಮಾಡಿದ ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಫೋಟೊ ತೆಗೆದಿರುತ್ತಾರೆ. ಫೊಟೊವನ್ನು ನಿ.ಪಿ-4 ಎಂದು ಗುರುತಿಸಲಾಯಿತು.

5. ಪೋಲಿಸರು ಸಂಜೆ 7-00 ಗಂಟೆಗೆ ಬಂದಿದ್ದರು . ಆಗ ಮಬ್ಬುಗತ್ತಲೆ ಆಗಿತ್ತು. ಪೋಲಿಸರು 5-30 ಆಗಿದೆ ಬರೆದುಕೊಳ್ಳಿ ಎಂದು ಹೇಳುತ್ತಿದ್ದರು. ಆ ಸಮಯದಲ್ಲಿ ಪೋಲಿಸರು ನಮಗೆ ರಾಡ ಮತ್ತು ಬಡಿಗೆ ತೆಗೆದುಕೊಂಡು ಬರಲು ಹೇಳಿದ್ದರು. ಆದರೆ ಹೊಡೆದಂತಹ ಆರೋಪಿತರು ಅವುಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದೆನು. ನಮಗೆ ಹೊಡೆಯಲು ಉಪಯೋಗಿಸಿದ ಕಲ್ಲುಗಳು ಅಲ್ಲೇ ಬಿದಿದ್ದವು, ಅಲ್ಲೆ ಇದ್ದಂತಹ 2 ಕಲ್ಲುಗಳನ್ನು ಪೋಲಿಸರು ಜಪ್ತಿ ಮಾಡಿಕೊಂಡರು. ಪಂಚನಾಮೆ ಮಾಡುವಾಗ ಸಂಜೆ ಆರೋಪಿತರು ಬಾಳಪ್ಪ , ಶೆಟ್ಟೆಪ್ಪ , ಲಕ್ಕಪ್ಪ , ಚೇತನ ಕಾಟಾಬಳಿ , ಸಾಗರ ಇವರೆಲ್ಲರೂ ಅಲ್ಲೇ ಹಾಜರ ಇದ್ದರು. ಪೋಲಿಸರು ನಾನು ಕಂಪ್ಲೆಂಟ ಕೊಡಲು ಹೋದಾಗ ಮೊದಲು ತೆಗೆದುಕೊಳ್ಳಲಿಲ್ಲ. ಆ ಸಮಯದಲ್ಲಿ ಹಿರೇಮಠ ವಕೀಲರು ತಮ್ಮ ಜ್ಯೂನಿಯರ ವಕೀಲರನ್ನು ಕಳುಹಿಸಿದ್ದರು , ಅಲ್ಲಿ ಆರೋಪಿತರು ರೂ. 30,00,000/-

ಕೊಡುತ್ತಾರೆ , ಕಂಪ್ಲೆಂಟ ಕೊಡಬೇಡಿ ಎಂದು ಹೇಳಿದರು. ನಾನು ಅದಕ್ಕೆ ಒಪ್ಪಲಿಲ್ಲ , ನನ್ನ ಮಗನಿಗೆ ಕಾಲು ಮುರಿಯುವಂತೆ ಹೊಡೆದಿದ್ದರು, ಆತನಿಗೆ ಮುಂದೆ ನೌಕರಿ ಸಿಗುವುದಿಲ್ಲ , ಆರೋಪಿತರಿಗ ಶಿಕ್ಷೆ ಆಗಬೇಕು ಎಂದು ನಾನು ದೂರನ್ನು ಕೊಟ್ಟೆ .

6. ಸದರಿ ಹಿರೇಮಠ ವಕೀಲರು ತಾರೀಖ ಹಾಕುತ್ತಾರೆ ಎಂದು ಇತ್ತೀಚೆಗೆ ಹೇಳಿದರು. ಆದರೂ ಸಹ ನಾವು ನ್ಯಾಯಾಲಯ ಮುದ್ದತ ಕೊಟ್ಟಿದ್ದರಿಂದ ಸಾಕ್ಷಿ ಹೇಳಲು ಇಲ್ಲಿ ಬಂದಿದ್ದೇನೆ . ಆರೋಪಿತರಾದ ಸಾಗರ ಮತ್ತು ಲಕ್ಕಪ್ಪನ ತಂದೆ ಗಂಗಪ್ಪ ಕಾಟಾಬಳಿ ಮತ್ತು ಕೆಂಪಣ್ಣ ಕಾಟಾಬಳಿ ಇವರು ದಿನಾಂಕ 31-12-2025 ರಂದು ನಮ್ಮ ಮನೆಗೆ ಬಂದು ನೀವು ನ್ಯಾಯಾಲಯಕ್ಕೆ ಹೋದರೆ ನಿಮ್ಮನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದರು. ಕೆಂಪಣ್ಣ ಕಾಟಾಬಳಿ ಬಂದೂಕು ಹಾಕಿಕೊಂಡು ಚಿಲಭಾವಿ ಗ್ರಾಮದಲ್ಲಿ ಓಡಾಡುತ್ತಾರೆ .

**ಪಾಟೀ ಸವಾಲು :** ಆರೋಪಿ ಪರ ವಕೀಲರು ಕಲಂ 254(3) ಬಿ ಎನ್ ಎಸ್ ಎಸ್ ಅಡಿ ಅರ್ಜಿ ಹಾಕಿದ್ದು ಪಾಟೀ ಸವಾಲಿಗೆ ಸಮಯ ನೀಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**